

# ಹಳಿಯಾಳ: ಬೋಧನಾ ಕೌಶಲ್ಯ ಉನ್ನತೀಕರಣ ಕಾರ್ಯಾಗಾರ ಯಶಸ್ವಿ

**ಶಿರಸಿ ಸಮಾಚಾರ ⏭ ಹಳಿಯಾಳ:** ವಿದ್ಯಾರ್ಥಿಗಳ ಮನಸ್ಥಿತಿಯನ್ನ ರಿತು ಶಿಕ್ಷಕರು ಪಾಠ ಮಾಡಿದ್ದಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಎಂದು ಮಹೇಶ್ ಮಾಷಲ್ ಹೇಳಿದರು.

ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಶಿಕ್ಷಕರ ಬೋಧನಾ ಕೌಶಲ್ಯವನ್ನು ಉನ್ನತೀಕರಣಗೊಳಿಸಲು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಮಾನವ ಮನಸ್ಥಿತಿ ತರಬೇತುದಾರರು ಹಾಗೂ ಶಿಕ್ಷಣ ತಜ್ಞರಾದ ಮಹೇಶ್ ಮಾರ್ಷಲ್ ಮತ್ತು ಭಾರತ ತಂತ್ರಜ್ಞಾನ ಸಂಸ್ಥೆ ಧಾರವಾಡದ ಡಾ.ಎಸ್.ಎಂ.ಶಿವಪ್ರಸಾದ್ ಆಗಮಿಸಿದ್ದರು. ಮಹೇಶ್ ಅವರು ಬೋಧಕ ಸಿಬ್ಬಂದಿಗಳನ್ನು ಉದ್ದೇಶಿಸಿ ಮಾತನಾಡುತ್ತ, ವಿದ್ಯಾರ್ಥಿಗಳ ಅಗತ್ಯತೆ ಮತ್ತು ಮಾನಸಿಕ ಸ್ಥಿತಿಗತಿಗಳನ್ನು ಅರಿತು ಶಿಕ್ಷಕರು ಬೋಧಿಸಿದ್ದಲ್ಲಿ ಉತ್ತಮ ರೀತಿಯ ಶಿಕ್ಷಣ ದೊರೆಯಲು ಸಾಧ್ಯ ಎಂದು ಹೇಳಿದರು. ಶಿಕ್ಷಕರು ಆಧುನಿಕ ತಂತ್ರಜ್ಞಾನವನ್ನು ಬಳಸಿ ಪರಿಣಾಮಕಾರಿಯಾಗಿ ಬೋಧನೆ ಮಾಡ ಬೇಕೆಂದು ಹೇಳಿದರು.

ಬದಲಾಗುತ್ತಿರುವ ತಂತ್ರಜ್ಞಾನದ ಜೊತೆಗೆ ಬೋಧನಾ ಕೌಶಲ್ಯವನ್ನು ಬದಲಿಸಿಕೊಳ್ಳುವುದು ಶಿಕ್ಷಕನಿಗೆ ಇಂದು ಅನಿವಾರ್ಯವಾಗಿದೆ ಎಂದು ಹೇಳಿದರು. ಡಾ. ಶಿವಪ್ರಸಾದ್ ಅವರು ಸಂಶೋಧನಾ ಕಾರ್ಯದಲ್ಲಿ ಬೋಧಕ ಸಿಬ್ಬಂದಿಗಳು ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಲ್ಲಿ ವಿಷಯದಲ್ಲಿ ಆಳವಾದ ಜ್ಞಾನವನ್ನು ಹೊಂದಬಹುದಾಗಿದ್ದು, ವಿದ್ಯಾರ್ಥಿಗಳಿಂದ ಉತ್ತಮ ಯೋಜನಾ ಕಾರ್ಯವನ್ನು ಮಾಡಿಸಬಹುದಾಗಿದೆ ಎಂದು ಹೇಳಿದರು.

ದೇಶ ಕಂಡ ಅತ್ಯುತ್ತಮ ರಾಷ್ಟ್ರಪತಿ ಹಾಗೂ ವಿಜ್ಞಾನಿ ಡಾ. ಎ ಪಿ ಜೆ ಅಬ್ದುಲ್ ಕಲಾಂ ಹಾಗೂ ಖ್ಯಾತ ವಿಜ್ಞಾನಿ ಡಾ. ಸಿಎನ್ಆರ್ ರಾವ್ ಅವರೊಂದಿಗೆ ತಮ್ಮ ಒಡನಾಟದ ಕುರಿತಾಗಿ ಶಿವಪ್ರಸಾದ್ ವಿವರಿಸಿದರು. ಸಮಾಜಕ್ಕೆ ಪೂರಕವಾಗುವ ಆವಿಷ್ಕಾರವನ್ನು ಮಾಡುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸ ಬೇಕೆಂದು ಶಿಕ್ಷಕರಿಗೆ ಕರೆ ನೀಡಿದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಹಳೆಯ ಬೋಧನಾ ಪದ್ಧತಿಗೆ ಕಟ್ಟುಬೀಳದೆ ನೂತನ ತಂತ್ರಜ್ಞಾನ ವನ್ನು ಉಪಯೋಗಿಸಿ ಬೋಧಿಸುವಂತೆ ಶಿಕ್ಷಕರಿಗೆ ಕರೆ ನೀಡಿದರು.

ಡಾ.ರವೀಂದ್ರಮುನ್ನೊಳ್ಳಿ ಸ್ವಾಗತಿಸಿದರು. ಡಾ. ಸಮೀರ್ ಗಲಗಲಿ ವಂದಿಸಿದರು. ಪ್ರೊ. ಸುಧೀರ್ ಕುಲಕರ್ಣಿ ನಿರೂಪಿಸಿದರು. ಡಾ. ಮಹೇಂದ್ರ ದೀಕ್ಷಿತ್, ಪ್ರೊ. ವರಪ್ರಸಾದ್ ಗಾಂವಕರ್, ಡಾ.ವಿನೋದ್ ನಾಯಕ್, ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮ ಸಂಯೋಜಿಸಿದ್ದರು. ಮಹಾವಿದ್ಯಾಲಯದ ಆವಿಷ್ಕಾರ ಪರಿಷತ್ತು, ಐಕ್ಯೂಎಸಿ ಹಾಗೂ ಮೂಲಭೂತ ವಿಜ್ಞಾನ ವಿಭಾಗವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 100ಕ್ಕೂ ಅಧಿಕ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

# ಬೋಧನಾ ಕೌಶಲ್ಯ ಉನ್ನತೀಕರಣ ಕಾರ್ಯಾಗಾರ

**ಹಳಿಯಾಳ:** ವಿದ್ಯಾರ್ಥಿಗಳ ಮನಸ್ಥಿತಿಯನ್ನರಿತು ಶಿಕ್ಷಕರು ಪಾಠ ಮಾಡಿದ್ದಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಎಂದು ಮಹೇಶ್ ಮಾಷಲ್ ಹೇಳಿದರು.

ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಮಾರ್ಚ್ 8ರಂದು ಶಿಕ್ಷಕರ ಬೋಧನಾ ಕೌಶಲ್ಯವನ್ನು ಉನ್ನತೀಕರಣಗೊಳಿಸಲು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಮಾನವ ಮನಸ್ಥಿತಿ ತರಬೇತುದಾರ ಹಾಗೂ ಶಿಕ್ಷಣ ತಜ್ಞ ಮಹೇಶ್ ಮಾರ್ಷಲ್ ಮತ್ತು ಭಾರತ ತಂತ್ರಜ್ಞಾನ ಸಂಸ್ಥೆ ಧಾರವಾಡದ ಡಾ.ಎಸ್. ಎಂ. ಶಿವಪ್ರಸಾದ್ ಆಗಮಿಸಿದ್ದರು. ಮಹೇಶ್ ಮಾತನಾಡಿ, ವಿದ್ಯಾರ್ಥಿಗಳ ಅಗತ್ಯತೆ ಮತ್ತು ಮಾನಸಿಕ ಸ್ಥಿತಿಗತಿಗಳನ್ನು ಅರಿತು ಶಿಕ್ಷಕರು ಬೋಧಿಸಿದ್ದಲ್ಲಿ ಉತ್ತಮ ರೀತಿಯ ಶಿಕ್ಷಣ ದೊರೆಯಲು ಸಾಧ್ಯ. ಶಿಕ್ಷಕರು ಆಧುನಿಕ ತಂತ್ರಜ್ಞಾನವನ್ನು ಬಳಸಿ ಪರಿಣಾಮಕಾರಿಯಾಗಿ ಬೋಧನೆ ಮಾಡಬೇಕೆಂದು ಹೇಳಿದರು.

ಡಾ. ಶಿವಪ್ರಸಾದ್ ಮಾತನಾಡಿ, ಸಂಶೋಧನಾ ಕಾರ್ಯದಲ್ಲಿ ಬೋಧಕ ಸಿಬ್ಬಂದಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಲ್ಲಿ ವಿಷಯದಲ್ಲಿ ಆಳವಾದ ಜ್ಞಾನವನ್ನು ಹೊಂದಬಹುದಾಗಿದ್ದು, ವಿದ್ಯಾರ್ಥಿಗಳಿಂದ ಉತ್ತಮ ಯೋಜನಾ ಕಾರ್ಯವನ್ನು ಮಾಡಿಸಬಹುದಾಗಿದೆ ಎಂದರು.



ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ, ಹಳೆಯ ಬೋಧನಾ ಪದ್ಧತಿಗೆ ಕಟ್ಟು ಬೀಳದೆ ನೂತನ ತಂತ್ರಜ್ಞಾನವನ್ನು ಉಪಯೋಗಿಸಿ ಬೋಧಿಸುವಂತೆ ಶಿಕ್ಷಕರಿಗೆ ಹೇಳಿದರು.

ಡಾ.ರವೀಂದ್ರ ಮುನ್ನೊಳ್ಳಿ ಸ್ವಾಗತಿಸಿದರು. ಡಾ.ಸಮೀರ್ ಗಲಗಲಿ ವಂದಿಸಿದರು. ಪ್ರೊ. ಸುಧೀರ್ ಕುಲಕರ್ಣಿ ನಿರೂಪಿಸಿದರು. ಡಾ. ಮಹೇಂದ್ರ ದೀಕ್ಷಿತ್, ಪ್ರೊ. ವರಪ್ರಸಾದ್ ಗಾಂವಕರ್, ಡಾ. ವಿನೋದ್ ನಾಯಕ್, ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮ ಸಂಯೋಜಿಸಿದ್ದರು. ಮಹಾವಿದ್ಯಾಲಯದ ಆವಿಷ್ಕಾರ ಪರಿಷತ್ತು, ಐಕ್ಯೂಎಸಿ ಹಾಗೂ ಮೂಲಭೂತ ವಿಜ್ಞಾನ ವಿಭಾಗವು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 100ಕ್ಕೂ ಅಧಿಕ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳ ಮನಃಸ್ಥಿತಿ ಅರಿತು ಪಾಠ ಮಾಡಿದರೆ ಗುಣಮಟ್ಟದ ಶಿಕ್ಷಣ ಸಾಧ್ಯ

## ಬೋಧನಾ ಕೌಶಲ ಉನ್ನತೀಕರಣ ಕಾರ್ಯಾಗಾರ ಯಶಸ್ವಿ




**ಹಳಿಯಾಳ:** ವಿದ್ಯಾರ್ಥಿಗಳ ಮನಃಸ್ಥಿತಿಯನ್ನರಿತು ಶಿಕ್ಷಕರು ಪಾಠ ಮಾಡಿದ್ದಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಎಂದು ಮಾನವ ಮನಸ್ಥಿತಿ ತರಬೇತುದಾರರು ಹಾಗೂ ಶಿಕ್ಷಣ ತಜ್ಞ ಮಹೇಶ್ ಮಾಷಲ್ ಹೇಳಿದರು.

ಇಲ್ಲಿನ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ನಡೆದ ಶಿಕ್ಷಕರ ಬೋಧನಾ ಕೌಶಲವನ್ನು ಉನ್ನತೀಕರಣಗೊಳಿಸುವ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಶಿಕ್ಷಕರು ಆಧುನಿಕ ತಂತ್ರಜ್ಞಾನವನ್ನು ಬಳಸಿ ಪರಿಣಾಮಕಾರಿಯಾಗಿ ಬೋಧನೆ ಮಾಡಬೇಕು. ಬದಲಾಗುತ್ತಿರುವ ತಂತ್ರಜ್ಞಾನದ ಜೊತೆಗೆ ಬೋಧನಾ ಕೌಶಲ್ಯವನ್ನು ಬದಲಿಸಿಕೊಳ್ಳುವುದು ಶಿಕ್ಷಕನಿಗೆ ಇಂದು ಅನಿವಾರ್ಯವಾಗಿದೆ ಎಂದು ಹೇಳಿದರು.

ಭಾರತ ತಂತ್ರಜ್ಞಾನ ಸಂಸ್ಥೆ ಧಾರವಾಡದ ಡಾ.ಎಸ್. ಎಂ. ಶಿವಪ್ರಸಾದ್ ಮಾತನಾಡಿ ಬೋಧಕ ಸಿಬ್ಬಂದಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಲ್ಲಿ ವಿಷಯದಲ್ಲಿ ಆಳವಾದ ಜ್ಞಾನವನ್ನು ಹೊಂದಬಹುದಾಗಿದ್ದು, ವಿದ್ಯಾರ್ಥಿಗಳಿಂದ ಉತ್ತಮ ಯೋಜನಾ ಕಾರ್ಯ ಮಾಡಿಸಬಹುದಾಗಿದೆ ಎಂದರು.

ದೇಶ ಕಂಡ ಅತ್ಯುತ್ತಮ ರಾಷ್ಟ್ರಪತಿ ಹಾಗೂ ವಿಜ್ಞಾನಿ ಡಾ. ಎ. ಪಿ. ಜೆ ಅಬ್ದುಲ್ ಕಲಾಂ ಹಾಗೂ ಖ್ಯಾತ ವಿಜ್ಞಾನಿ ಡಾ. ಸಿ ಎನ್ ಆರ್ ರಾವ್ ಅವರೊಂದಿಗೆ ತಮ್ಮ ಒಡನಾಟದ ಕುರಿತಾಗಿ ಅವರು ವಿವರಿಸಿದರು. ಸಮಾಜಕ್ಕೆ ಪೂರಕವಾಗುವ ಆವಿಷ್ಕಾರವನ್ನು ಮಾಡುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸಬೇಕೆಂದು ಶಿಕ್ಷಕರಿಗೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಹಳೆಯ ಬೋಧನಾ ಪದ್ಧತಿಗೆ ಕಟ್ಟು ಬೀಳದೆ ನೂತನ ತಂತ್ರಜ್ಞಾನವನ್ನು ಉಪಯೋಗಿಸಿ ಬೋಧಿಸುವಂತೆ ಶಿಕ್ಷಕರಿಗೆ ಹೇಳಿದರು.

ಡಾ. ಮಹೇಂದ್ರ ದೀಕ್ಷಿತ್, ಪ್ರೊ. ವರಪ್ರಸಾದ್ ಗಾಂವಕರ್, ಡಾ. ವಿನೋದ್ ನಾಯಕ್, ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮ ಸಂಯೋಜಿಸಿದ್ದರು. ಮಹಾವಿದ್ಯಾಲಯದ ಆವಿಷ್ಕಾರ ಪರಿಷತ್ತು, ಐ ಕ್ಯೂ ಎ ಸಿ ಹಾಗೂ ಮೂಲಭೂತ ವಿಜ್ಞಾನ ವಿಭಾಗವು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 100ಕ್ಕೂ ಅಧಿಕ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

ಡಾ. ರವೀಂದ್ರ ಮುನ್ನೊಳ್ಳಿ ಸ್ವಾಗತಿಸಿದರು. ಪ್ರೊ. ಸುಧೀರ್ ಕುಲಕರ್ಣಿ ನಿರೂಪಿಸಿದರು. ಡಾ. ಸಮೀರ್ ಗಲಗಲಿ ವಂದಿಸಿದರು.